KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2025/ 679

ದಿನಾಂಕ: 08/12/2025

# ಅಧಿಸೂಚನೆ

ವಿಷಯ: ಜನೇವರಿ 2026 ರಲ್ಲಿ ಜರುಗುವ ಎಲ್ಲ ಸ್ನಾತಕ ಪದವಿಯ 1, 3, 5 ಮತ್ತು 7 ನೇ ಸೆಮಿಸ್ಟರ್ ಸಿ.ಬಿ.ಸಿ.ಎಸ್ ರಿಪೀಟರ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ/ ಶುಲ್ಕ ತುಂಬುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 26.11.2025

ಎಲ್ಲ ಸ್ನಾತಕ ಪದವಿಯ 1, 3, 5 ಮತ್ತು 7 ನೇ ಸೆಮಿಸ್ಟರ್ ಸಿ.ಬಿ.ಸಿ.ಎಸ್ ರಿಪೀಟರ್ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಗಳು ಜನೇವರಿ 2026 ರಲ್ಲಿ ಜರುಗುವವು. ಸದರಿ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕ.ವಿ.ವಿ. ಅಂತರಜಾಲದಲ್ಲಿ (**www.kud.ac.in(Notification)** ದಲ್ಲಿ ಪ್ರಕಟಿಸಲಾಗುವುದು.

ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ ಅಂತರ್ಜಾಲ ಮೂಲಕ ಪರೀಕ್ಷಾ ಅರ್ಜಿ/ಶುಲ್ಕಗಳನ್ನು ತುಂಬಿಸಿಕೊಳ್ಳುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕವನ್ನು ತಪ್ಪದೆ ಗಮನಿಸಬೇಕು. ಪರೀಕ್ಷಾ ವಿಭಾಗಕ್ಕೆ ಅರ್ಜಿಗಳನ್ನು ಸಲ್ಲಿಸುವಾಗ ಪಾವತಿಸಿದ ಮೂಲ ಚಲನ ಪ್ರತಿ ಹಾಗೂ ಅಗತ್ಯ ದಾಖಲೆಗಳ ಝರಾಕ್ಸ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಬೇಕು.

1. **ದಿನಾಂಕ:09/12/2025** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು ಕವಿವಿ ಅಂತರ್ಜಾಲ **(www.kud.ac.in(Notification)** ದಿಂದ ಪಡೆದುಕೊಂಡು, ಅಂತರ್ಜಾಲ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಮಹಾವಿದ್ಯಾಲಯಕ್ಕೆ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:16/12/2025** (ಮಹಾವಿದ್ಯಾಲಯದವರು ವಿದ್ಯಾರ್ಥಿಗಳಿಂದ ಪಡೆದ ಅರ್ಜಿಗಳನ್ನು ಪರೀಕ್ಷಾ ಶುಲ್ಕದೊಂದಿಗೆ ಭರ್ತಿ ಮಾಡಲು ಕೊನೆಯ **ದಿನಾಂಕ:18/12/2025)**
2. ವಿದ್ಯಾರ್ಥಿಗಳು **ರೂ.200/-** ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು ಕ.ವಿ.ವಿ. ಅಂತರಜಾಲ **(www.kud.ac.in(Notification)** ದಿಂದ ಪಡೆದುಕೊಂಡು, ಅಂತರ್ಜಾಲದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಮಹಾವಿದ್ಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:18/12/2025.** (ಮಹಾವಿದ್ಯಾಲಯದವರು ವಿದ್ಯಾರ್ಥಿಗಳಿಂದ ಪಡೆದ ಅರ್ಜಿಗಳನ್ನು ಪರೀಕ್ಷಾ ಶುಲ್ಕದೊಂದಿಗೆ ಭರ್ತಿ ಮಾಡಲು ಕೊನೆಯ **ದಿನಾಂಕ:19/12/2025)**
3. ಮಹಾವಿದ್ಯಾಲಯಗಳ ಪ್ರಾಚಾರ್ಯರು ದಂಡವಿಲ್ಲದೆ ಹಾಗೂ ದಂಡದೊಂದಿಗೆ ಸ್ವೀಕರಿಸಿದ ಅರ್ಜಿಗಳನ್ನು ಹಾಗೂ ಅಂತರ್ಜಾಲದ ಮೂಲಕ ಮಹಾವಿದ್ಯಾಲಯದವರು ಭರಿಸಿದ ಶುಲ್ಕದ ರಶೀದಿಗಳನ್ನು ಯಾದಿಗಳ ಜೊತೆಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ **ದಿನಾಂಕ:22/12/2025.**

## <u>ವಿಶೇಷ ಸೂಚನೆಗಳು</u>

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಾಹಾವಿದ್ಯಾಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವದು ಕಡ್ಡಾಯವಾಗಿರುತ್ತದೆ. ಕೆಲವೊಂದು ಮಹಾವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವದಕ್ಕೆ/ವಿಸ್ತರಿಸುವದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವದು.

**ಪು.ತಿ.ನೋ**

2. ಸರಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-2), ಕರ್ನಾಟಕ ಸರಕಾರದ ಸಚಿವಾಲಯ, ಬಹುಮಹಡಿ ಕಟ್ಟಡ ಇವರ ಪತ್ರ ನಂ.ಇಡಿ 13 ಯುಕೆಎಸ್ 2014 ದಿನಾಂಕ 16/01/2015 ರಲ್ಲಿ ಎಲ್ಲ ಪದವಿ ಕೋರ್ಸಗಳೆನ್ನು ಪೂರ್ಣಗೊಳಿಸುವ ಗರಿಷ್ಠ ಅವಧಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಸ್ತುತ ಜಾರಿಯಲ್ಲಿರುವ ನಿಯಮದಂತೆ (Resolution) "ಎಲ್ಲ ವಿದ್ಯಾರ್ಥಿಗಳು ಒಂದು ವರ್ಷದ ಅವಧಿಯ ಪದವಿಯನ್ನು ಮೂರು ವರ್ಷಗಳೊಳಗಾಗಿ ಮತ್ತು ಇತರೆ ಪದವಿಗಳ ವಿದ್ಯಾರ್ಥಿಗಳು ತಮ್ಮ ಪದವಿಯನ್ನು Double the Duration of the Course ನ ಒಳಗಾಗಿ ಪೂರ್ಣಗೊಳಿಸಲು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಕ್ರಮವಹಿಸುವಂತೆ ನಿರ್ದೇಶಿಸಿರುತ್ತಾರೆ." ಅದರಂತೆ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು ಕ್ರಮ ಜರುಗಿಸುವಂತೆ ಮಾನ್ಯ ಕುಲಪತಿಗಳು ದಿನಾಂಕ: 16/02/2015 ರಲ್ಲಿ ಆದೇಶಿಸಿರುತ್ತಾರೆ.

3. ಕವಿವಿ ವ್ಯಾಪ್ತಿಯ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ/ ಸಂಯೋಜಕರಿಗೆ ತಿಳಿಸುವದೇನೆಂದರೆ, ಎಲ್ಲ 1 ವರ್ಷದ ಪದವಿಯನ್ನು 3 ವರ್ಷದೊಳಗಾಗಿ ಹಾಗೂ 3 ವರ್ಷದ ಪದವಿಯನ್ನು 6 ವರ್ಷದೊಳಗಾಗಿ ಪೂರ್ಣಗೊಳಿಸಲು ವಿದ್ಯಾರ್ಥಿಗಳಿಗೆ ತಿಳಿಸುವುದು. ಅದಕ್ಕಿಂತ ಪೂರ್ವದಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ ತುಂಬಲು ಮತ್ತು ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡಬಾರದೆಂದು ತಿಳಿಸಲಾಗಿದೆ.

## ಸೂಚನೆಗಳು

1. ಅಂತರ್ಜಾಲದ (ಆನ್ ಲೈನ) ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಮುಂದಿನ ಷರುತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮೆಸ್ಟರ/ನಾನ್ ಸೆಮೆಸ್ಟರ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಷರುತ್ತುಗಳಿಗೆ ಒಳಪಟ್ಟಿರುತ್ತದೆ. ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ) ಫ್ರೀಜ್/ ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.

2. ಪರೀಕ್ಷಾ ಶುಲ್ಕದ ಜೊತೆಗೆ. ಪ್ರತಿ ವಿದ್ಯಾರ್ಥಿಯು ರೂ.110/-ನ್ನು ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಯ ಪ್ರಕ್ರೀಯೆ ಶುಲ್ಕವನ್ನು (ಪ್ರತಿ ಸೆಮೆಸ್ಟರಗೆ) ಮತ್ತು ರೂ.160/-ನ್ನು ಅಂಕಪಟ್ಟಿ ಶುಲ್ಕವೆಂದು ಪಾವತಿಸಬೇಕಾಗುತ್ತದೆ.

3. ಕರ್ನಾಟಕ ಸರ್ಕಾರವು SSP ಮೂಲಕ SC/ST/Cat-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸುವುದು.

4. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸಲಾಗುವದಿಲ್ಲ. ಅಲ್ಲದೆ, ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲಾ ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ

5. ಮಹಾವಿದ್ಯಾಲಯದ ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ ಮಾಹಿತಿಯ ಯಾದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು (ಹಾರ್ಡಕಾಪಿ) ಅವಶ್ಯ ದಾಖಲೆಗಳೊಂದಿಗೆ/ನಕಲು (ಝರಾಕ್ಸ್) ಅಂಕಪಟ್ಟಿಗಳೊಂದಿಗೆ ನೇರವಾಗಿ ಸಂಬಂಧಪಟ್ಟ ಕಚೇರಿ ಅಧೀಕ್ಷಕರು, ಪರೀಕ್ಷಾ ವಿಭಾಗ, ವಿಶ್ವಚೇತನ ಬಿಲ್ಡಿಂಗ್, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ-580003 ಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಮಹಾವಿದ್ಯಾಲಯದವರು ಸಲ್ಲಿಸುವುದು.

6. ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು / ತಪ್ಪುಗಳು ಉಂಟಾದರೆ ಮಹಾವಿದ್ಯಾಲಯದವರು ಜವಾಬ್ದಾರರಾಗಿರುತ್ತಾರೆ.

ಪು.ತಿ.ನೋ

7. ಪರೀಕ್ಷೆಗೆ ಸಂಬಂಧಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವದಿಲ್ಲ.

**ಪರೀಕ್ಷಾ ಶುಲ್ಕದ ವಿವರ ಈ ಕೆಳಗಿನಂತಿದೆ**

| ಅ.ನಂ | ವಿವರ | ಶುಲ್ಕ ರೂ. |
|---|---|---|
| 01 | ಅಂತರ್ಜಾಲದ ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | 110/- |
| 02 | ಅಂಕಪಟ್ಟಿ ಶುಲ್ಕ | 160/- |
| 03 | ಪ್ರೋಜೆಕ್ಟ /ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ (ಸಂಬಂಧಪಟ್ಟ ಕೋರ್ಸುಗಳಿಗೆ) | 590/- |
| 04 | **ಪರೀಕ್ಷಾ ಶುಲ್ಕ**: ಬಿ.ಎ./ ಬಿ.ಎಸ್‌ಸಿ. /ಬಿ.ಕಾಂ/ಬಿ.ಎ.(ಐ.ಎಲ್.ಆರ್.ಡಿ) 1, 3, ಮತ್ತು 5ನೇ ಸೆಮೆಸ್ಟರ. 1 ಪೇಪರ ₹ 265/-, 2 ಪೇಪರ ₹ 530/-, 3 ಪೇಪರ ₹ 795/--, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 865/- | 865/- |
| 05 | **ಪರೀಕ್ಷಾ ಶುಲ್ಕ**: ಬಿ.ಎಸ್.ಡಬ್ಲೂ 1, 3, ಮತ್ತು 5 ನೇ ಸೆಮೆಸ್ಟರ. 1 ಪೇಪರ ₹ 280/-, 2 ಪೇಪರ ₹ 560/-, 3 ಪೇಪರ ₹ 840/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1070/- | 1070/- |
| 06 | **ಪರೀಕ್ಷಾ ಶುಲ್ಕ**: ಬಿಬಿಎ/ಬಿ.ಸಿ.ಎ/ಬಿ.ಕಾಂ.(ಸಿಎಸ್)/ ಬಿ.ಎಸ್‌ಸಿ.(ಸಿಎಸ್)/ ಬಿ.ಟಿ.ಎ./ ಬಿ.ಎ.ಎಸ್.ಎಲ್.ಪಿ / ಬಿ.ಟಿ.ಟಿ.ಎಮ್ / ಬಿ.ಎಸ್‌ಸಿ(ಹೆಚ್.ಎಮ್) 1, 3, 5 ಮತ್ತು 7 ನೇ ಸೆಮೆಸ್ಟರ. 1 ಪೇಪರ ₹ 325/- 2 ಪೇಪರ ₹ 650/-, 3 ಪೇಪರ ₹ 975/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1145/- | 1145/- |
| 07 | **ಪರೀಕ್ಷಾ ಶುಲ್ಕ**: ಬಿ.ಬಿ.ಎ. (ಹೋಟೆಲ್ ಮತ್ತು ಟೂರಿಸಂ) 1, 3, ಮತ್ತು 5 ನೇ ಸೆಮೆಸ್ಟರ 1 ಪೇಪರ ₹ 375/-, 2 ಪೇಪರ ₹ 750/-, 3 ಪೇಪರ ₹ 1125/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1550/- | 1550/- |
| 08 | **ಪರೀಕ್ಷಾ ಶುಲ್ಕ**: ಬಿ.ವಿ.ಎ-1, 3, 5 ಮತ್ತು 7 ನೇ ಸೆಮೆಸ್ಟರ 1 ಪೇಪರ ₹ 300/-, 2 ಪೇಪರ ₹ 600/-, 3 ಪೇಪರ ₹ 900/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1335/- | 1335/- |
| 09 | **ಪರೀಕ್ಷಾ ಶುಲ್ಕ**: ಬಿ.ಮ್ಯೂಸಿಕ್/ಬಿ.ಪಿ.ಎ/ಬಿ.ಎ.ಎಸ್ಸಿ(ಪಲ್ಪ ಮತ್ತು ಪೇಪರ ಸಾಯನ್ಸ್) 1, 3, 5 ಮತ್ತು 7 ನೇ ಸೆಮೆಸ್ಟರ. 1 ಪೇಪರ ₹ 300/-, 2 ಪೇಪರ ₹ 600/-, 3 ಪೇಪರ ₹ 900/-, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 940/- | 940/- |
| 10 | <u>**ಅಂಕ ಸುಧಾರಣೆ : ಸ್ನಾತಕ (ಯು.ಜಿ) ಕೋರ್ಸಗಳಿಗೆ**</u><br>**ಅ) ಮೊದಲನೆಯ ಸಲ**: 1 ಪೇಪರ ₹ 605/-, 2 ಪೇಪರ ₹ 1210/-, 3 ಪೇಪರ ₹ 1815/- 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 2145/- | 2145/- |
| 11 | **ಬ) ಎರಡನೆಯ ಸಲ**: 1 ಪೇಪರ ₹ 855/-, 2 ಪೇಪರ ₹ 1710/-, 3 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 2360/- | 2360/- |
| 12 | **ಕ) ಮೂರನೆಯ ಸಲ**: 1 ಪೇಪರ ₹ 1205/-, 2 ಪೇಪರ ₹ 2410/-, 3 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 3005/- | 3005/- |

ಸದರಿ ಮೇಲಿನ ಅಧಿಸೂಚನೆಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಫಾರ್ಮ/ಶುಲ್ಕಗಳನ್ನು ತುಂಬಿಸಿಕೊಳ್ಳುವುದು.

8/12

ಕುಲಸಚಿವರು(ಮೌಲ್ಯಮಾಪನ)

ಗೆ,

ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪು.ತಿ.ನೋ**

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ-೧/ಓಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ವಿತರಿಸುವುದು.)
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕವಿವಿ, ಧಾರವಾಡ
6) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
7) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
8) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9) ಅಧೀಕ್ಷಕರು, ಗೌಪ್ಯ/ಪ್ರಶ್ನೆಪತ್ರಿಕೆ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕವಿವಿ, ಧಾರವಾಡ.

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

### ಪರೀಕ್ಷಾ ವಿಭಾಗ,

ಮಹಾವಿದ್ಯಾಲಯದ ಹೆಸರು :
ಕಾಲೇಜ ಕೋಡ್:
ಕೋರ್ಸ –

| ಕ್ರ ಸಂ | ವಿವಿರ | ವಿದ್ಯಾರ್ಥಿಗಳ ಸಂಖ್ಯೆ | ಆನ್‌ಲೈನ್ ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಪಾಸಾದ ಪ್ರಮಾಣ ಪತ್ರದ ಶುಲ್ಕ | ಪ್ರೋಜೆಕ್ಟ/ ವೈವಾ (ಅನ್ವಯಿಸುವ ಕೋರ್ಸಗಳಿಗೆ) ಶುಲ್ಕ | ಪರೀಕ್ಷಾ ಶುಲ್ಕ | ದಂಡದ ಶುಲ್ಕ | ಒಟ್ಟೂ ಶುಲ್ಕ | ರಿಯಾಯಿತಿ ನೀಡಿದ ಪರೀಕ್ಷಾ ಶುಲ್ಕ |
|---|---|---|---|---|---|---|---|---|---|---|
| 1 | ಸಾಮಾನ್ಯ | | | | | | | | | |
| 2 | ಪ.ಜಾ | | | | | | | | | |
| 3 | ಪ.ಪಂ | | | | | | | | | |
| 4 | ಪ್ರವರ್ಗ-1 | | | | | | | | | |
| 5 | ಹಿಂದುಳಿದ ವರ್ಗ 2A, 2B, 3A, 3B | | | | | | | | | |
| ಒಟ್ಟೂ. | | | | | | | | | | |

1)ಪ.ಜಾ/ಪ.ಪಂ/ಪ್ರವರ್ಗ-1/ಹಿ.ವರ್ಗ[2A, 2B, 3A, 3B] : ಒಟ್ಟೂ ಶುಲ್ಕ ರೂ.

2) ಆನ್‌ಲೈನ್ ಮೂಲಕ ತುಂಬಿದ ಚಲನ್ ಸಂಖ್ಯೆ : ದಿನಾಂಕ : ರೂ.